

ತಂಬಾಕು ಸೇವನೆಯೆಂದರೆ ಮೆಂಟವಯ್‌ಗಳಿಗೆ ಅಚ್ಚುಮೆಚ್ಚು





# ಹಾಯ್, ಮೆಂಟವಯ್

ಇಂಡೊನೇಷ್ಯಾದ ಮೆಂಟವಯ್ ಬುಡಕಟ್ಟು ಸಮುದಾಯ ಆಧುನಿಕ ಜಗತ್ತಿನ ಸಂಪರ್ಕ ಉಳಿಸಿಕೊಂಡೂ ತನ್ನ ಅನನ್ಯತೆ ಉಳಿಸಿಕೊಂಡಿದೆ. ಪ್ರವಾಸಿಗರು ಅವರೊಂದಿಗೆ ಬೆರೆಯಲು, ಅವರ ಜೊತೆ ಸ್ವಲ್ಪ ಕಾಲ ಉಳಿಯಲು ಅವಕಾಶವಿದೆ.

■ ಡಿ.ಜಿ. ಮಲ್ಲಿಕಾರ್ಜುನ

ಫೇಸ್‌ಬುಕ್‌ನಲ್ಲಿ ಸಿಕ್ಕ ಸಂಪರ್ಕದ ಎಳೆಯನ್ನು ಹಿಡಿದು ನಾವು ಆರು ಮಂದಿ ಛಾಯಾಗ್ರಾಹಕರು ಇಂಡೊನೇಷ್ಯಾದ ಪಡಾಂಗ್ ವಿಮಾನ ನಿಲ್ದಾಣ ತಲುಪಿದೆವು. ಎಲ್ಲರನ್ನೂ ಒಳಕ್ಕೆ ಬಿಟ್ಟುಕೊಂಡ ಅಲ್ಲಿನ ಕಸ್ಟಮ್ಸ್ ಅಧಿಕಾರಿಗಳು ನಮ್ಮನ್ನು ಪಕ್ಕಕ್ಕೆ ನಿಲ್ಲಿಸಿ ವಿಚಾರಣೆ ಶುರು ಮಾಡಿದರು.

‘ಮೆಂಟವಯ್ ದ್ವೀಪಗಳಿಗೆ ನಾವು ಹೋಗಬೇಕು. ಅಲ್ಲಿ ಬುಡಕಟ್ಟು ಜನಾಂಗದವರೊಂದಿಗೆ ಒಂದೆರಡು ದಿನ ಕಾಲ ಕಳೆದು ಫೋಟೋಗ್ರಫಿ ಮಾಡಬೇಕಾಗಿದೆ’ ಎಂದು ನಾವು ಅವರಿಗೆ ವಿವರಿಸಿದೆವು. ಬಹುಶಃ ಭಾರತದಿಂದ ಈ ಮೆಂಟವಯ್ ಜನರನ್ನು ಭೇಟಿ ಮಾಡಲು ಹೋದವರು ನಾವೇ ಮೊದಲಿಗರೇನೋ? ವಿಮಾನ ನಿಲ್ದಾಣದ ಅಧಿಕಾರಿಗಳು ಹಲವಾರು ಪ್ರಶ್ನೆಗಳನ್ನು ಕೇಳಿದರು. ನಮ್ಮನ್ನು ಅಲ್ಲಿಗೆ ಕರೆದೊಯ್ಯಲು ಒಪ್ಪಿದ್ದವರನ್ನು ಕರೆಸಿ ಮಾತನಾಡಿದ ಬಳಿಕ ಸಮಾಧಾನಗೊಂಡರು. ನಮ್ಮ ಪಾಸ್ ಪೋರ್ಟ್ ಮೇಲೆ ಠಸ್ಸೆ ಹೊಡೆದು, ‘ಶುಭವಾಗಲಿ’ ಎಂದರು.